# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ವ್ಯಾಪ್ತಿಯ ತುರ್ತು ನಿರ್ವಹಣಾ ಶಾಖೆಯಲ್ಲಿ ಮಂಜೂರಾಗಿರುವ ಲೈಸನ್ ಆಫೀಸರ್ ಹುದ್ದೆಯನ್ನು Information Education Communication Officer (IEC) ಎಂದು ಪದನಾಮೀಕರಣಗೊಳಿಸಿ, ಸದರಿ ಸಿಬ್ಬಂದಿಯನ್ನು ಗುತ್ತಿಗೆ ಆಧಾರದ ಮೇಲೆ ಪಡೆಯುವ ಕುರಿತು.

**ಓದಲಾಗಿದೆ:**

1. ಸರ್ಕಾರದ ಆದೇಶ ಸಂಖ್ಯೆ: ಕಂಇ 21 ಇಟಿಸಿ 2014, ಬೆಂಗಳೂರು,ದಿನಾಂಕ:25-07-2014.
2. ಸರ್ಕಾರದ ಆದೇಶ ಸಂಖ್ಯೆ: ಕಂಇ 76 ಇಟಿಸಿ 2018, ಬೆಂಗಳೂರು,ದಿನಾಂಕ:04-01-2019.
3. ರಾಜ್ಯ ಕಾರ್ಯಕಾರಿ ಸಮಿತಿ ನಡವಳಿ ದಿನಾಂಕ:12.03.2024.
4. ರಾಜ್ಯ ಚುನಾವಣಾ ಆಯುಕ್ತರು, ರವರ ಸಹಮತಿಯಂತೆ ಸಚಿವ ಸಂಪುಟ ಶಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ:CS/19/SCM/2024, ದಿನಾಂಕ:19.04.2024

*****

ಮೇಲೆ ಓದಲಾದ ಕ್ರಮಾಂಕ (1) ರ ದಿನಾಂಕ:25-07-2014ರ ಆದೇಶದಲ್ಲಿ, ವಿಪತ್ತು ನಿರ್ವಹಣಾ ಶಾಖೆಯಲ್ಲಿ ಕೇಂದ್ರೀಯ 15ನೇ ಹಣಕಾಸಿನ ಆಯೋಗದ ಶಿಫಾರಸ್ಸಿರನ್ವಯ ಕೆಪಾಸಿಟಿ ಬಿಲ್ಡಿಂಗ್ ಹಾಗೂ ವಿಪತ್ತು ಉಪಶಮನ ನಿಧಿಯಡಿ ಸಾಕಷ್ಟು ಯೋಜನೆಗಳನ್ನು ರೂಪಿಸಿ ಅನುಷ್ಠಾನಗೊಳಿಸಲು ಹಾಗೂ ಪ್ರಕೃತಿ ವಿಕೋಪ ಪರಿಹಾರ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ವಿಪತ್ತು ನಿರ್ವಹಣೆ ಕೋಶದಡಿ ಲೈಸನ್ ಆಫೀಸರ್ ಹುದ್ದೆಯನ್ನು ಸೃಜಿಸಿ ಗುತ್ತಿಗೆ ಆಧಾರದ ಮೇರೆಗೆ ಮಾಸಿಕ ರೂ. 50, 000 /- ರಂತೆ ವೇತನ ನಿಗದಿಪಡಿಸಿ, ಮಾಸಿಕ ಸಂಭಾವನೆಯನ್ನು ಲೆಕ್ಕ ಶೀರ್ಷಿಕೆ : 2245-80-101-0-01-034 ರಡಿ ಭರಿಸಲು ನಿಗಧಿಪಡಿಸಲಾಗಿರುತ್ತದೆ. ಮೇಲೆ ಓದಲಾದ ಕ್ರಮಾಂಕ(2)ರ ಆದೇಶದಲ್ಲಿ ಈ ಹುದ್ದೆಯ ಮಾಸಿಕ ಸಂಭಾವನೆಯನ್ನು ದಿನಾಂಕ:01.01.2019ರಿಂದ ಅನ್ವಯವಾಗುವಂತೆ ರೂ. 50,000/- ದಿಂದ ಶೇ. 10 ರಷ್ಟು ಹೆಚ್ಚಿಸಿ ರೂ. 55,000 ಕ್ಕೆ ನಿಗದಿಪಡಿಸಿ ಮಂಜೂರಾತಿ ನೀಡಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ(3)ರ ದಿನಾಂಕ:12.03.2024ರಂದು ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ನಡೆದ ರಾಜ್ಯ ಕಾರ್ಯಕಾರಿ ಸಮಿತಿಯಲ್ಲಿ ಪ್ರಸ್ತುತ ವಿಪತ್ತು ನಿರ್ವಹಣೆ ಲೈಸನ್ ಆಫೀಸರ್(Liason officer) ಹುದ್ದೆಯು ಖಾಲಿಯಿದ್ದು, ಶಾಖೆಯ ಸುಗಮ ಕಾರ್ಯನಿರ್ವಹಣೆಗಾಗಿ ಹಾಗೂ ಹವಾಮಾನ ಬದಲಾವಣೆ, IEC ವಿಷಯದ ತಯಾರಿ/ಅನುವಾದ, ವಿಪತ್ತು ಅಪಾಯ ತಗ್ಗಿಸುವಿಕೆ ಮತ್ತು ಇಲಾಖೆಯ ಟ್ವಿಟರ್ ಹ್ಯಾಂಡಲ್ ಮತ್ತು ಇತರ ಸಾಮಾಜಿಕ ಮಾಧ್ಯಮಗಳ ಪರಿಣಾಮಕಾರಿ ಬಳಕೆಗಾಗಿ ಹಾಗೂ ವಿಪತ್ತು ನಿರ್ವಹಣೆ ವಿಷಯಗಳ ಕುರಿತು ಸಾಮಾಜಿಕ ಮಾಧ್ಯಮದಲ್ಲಿ ಪರಿಣಿತರಿರುವ ಹಾಗೂ ವಿಪತ್ತು ನಿರ್ವಹಣೆ ವಿಭಾಗದಲ್ಲಿ ಸಂವಹನ ವೃತ್ತಿಪರರ ಅವಶ್ಯಕತೆ ಇರುವುದರಿಂದ, ಲೈಸನಿಂಗ್ ಆಫೀಸರ್ ಹುದ್ದೆಯ ಪದನಾಮವನ್ನು Information Education Communication Officer(IEC) ಎಂದು ಪದನಾಮೀಕರಣಗೊಳಿಸಲು ಹಾಗೂ ಈ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ 11 ತಿಂಗಳ ಅವಧಿಗೆ ಪಡೆಯಲು ನಿರ್ಣಯ ಕೈಗೊಳ್ಳಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ(4)ರಲ್ಲಿ ಲೈಸನಿಂಗ್ ಆಫೀಸರ್ ಹುದ್ದೆಯ ಪದನಾಮವನ್ನು Information Education Communication Officer(IEC) ಎಂದು ಪದನಾಮೀಕರಣಗೊಳಿಸಲು

...2

ಹಾಗೂ ಈ ಹುದ್ದೆಯನ್ನು ಗುತ್ತಿಗೆ ಆಧಾರದ ಮೇಲೆ 11 ತಿಂಗಳ ಅವಧಿಗೆ ಭರ್ತಿ ಮಾಡಲು ರಾಜ್ಯ ಚುನಾವಣಾ ಆಯುಕ್ತರು, ರವರು ಸಹಮತಿ ನೀಡಿರುವುದಾಗಿ ಸಚಿವ ಸಂಪುಟ ಶಾಖೆಯು ಅನುಮೋದನೆ ನೀಡಿರುತ್ತದೆ. ಅದರಂತೆ ಈ ಕೆಳಕಂಡಂತೆ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಕಂಇ 408 ಟಿಎನ್‌ಆರ್ 2023,**
**ಬೆಂಗಳೂರು,ದಿನಾಂಕ:19-09-2024.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನಲೆಯಲ್ಲಿ, IEC ಮೂಲಕ ವಿಪತ್ತು ಅಪಾಯ ತಗ್ಗಿಸುವಿಕೆ ಕಾರ್ಯಗಳನ್ನು ಪರಿಣಾಮಕಾರಿಯಾಗಿ ನಿರ್ವಹಿಸಲು ವಿಪತ್ತು ನಿ ರ್ವಹಣೆ ಕೋಶದಡಿ ಪ್ರಸ್ತುತ ಖಾಲಿ ಇರುವ ವಿಪತ್ತು ನಿರ್ವಹಣೆ ಲೈಸನ್ ಆಫೀಸರ್ ಹುದ್ದೆಯನ್ನು Information Education Communication Officer(IEC) ಎಂದು ಮರು ಪದನಾಮೀಕರಣಗೊಳಿಸಿ ಆದೇಶಿಸಿದೆ.

ಮುಂದುವರೆದು, ಸದರಿ ಹುದ್ದೆಯನ್ನು ಭರ್ತಿಯಾದ ದಿನಾಂಕದಿಂದ 11 ತಿಂಗಳ ಅವಧಿಗೆ ಮಾಸಿಕ ರೂ.55,000/- ಗೌರವಧನದೊಂದಿಗೆ ಗುತ್ತಿಗೆ ಆಧಾರದ ಮೇಲೆ **ಇದರೊಂದಿಗೆ ಅನುಬಂಧಿಸಿರುವಂತೆ** ಅರ್ಹತೆ ಹಾಗೂ ಕರ್ತವ್ಯಗಳನ್ನು ನಿರ್ವಹಿಸಲು ಹಾಗೂ ಈ ಹುದ್ದೆಯು ನೇಮಕಗೊಳ್ಳುವ ದಿನಾಂಕದಿಂದ 11 ತಿಂಗಳ ಅವಧಿಗೆ ಮಾತ್ರ ಭರ್ತಿ ಮಾಡಲು ಅನುಮತಿ ನೀಡಿ ಆದೇಶಿಸಿದೆ.

ಇದಕ್ಕೆ ತಗುಲುವ ವೆಚ್ಚವನ್ನು 2024-25ನೇ ಸಾಲಿನಲ್ಲಿ ಒದಗಿಸಿರುವ ಲೆಕ್ಕ ಶೀರ್ಷಿಕೆ: "2245-80-102-0-01-059" ರಲ್ಲಿ ಒದಗಿಸಿರುವ ಅನುದಾನದಿಂದ ಭರಿಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ:ಆಇ 790 ವೆಚ್ಚ-7/2023, ರ ದಿನಾಂಕ:02.02.2024ರ ಸಹಮತಿಯಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ
ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

Mukhtar Pasha. H-G
19/9/2024
(ಮುಕ್ತಾರ್ ಪಾಷ .ಹೆಚ್.ಜಿ)
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಮತ್ತು ಸೇವೆಗಳು-3)

19/9/24

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ನಿರ್ದೇಶಕರು, ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ, ಯಲಹಂಕ, ಬೆಂಗಳೂರು-64.
3. ಆಯುಕ್ತರು, ಕರ್ನಾಟಕ ರಾಜ್ಯ ವಿಪತ್ತು ನಿರ್ವಹಣಾ ಪ್ರಾಧಿಕಾರ, ಬಹುಮಹಡಿಗಳ ಕಟ್ಟಡ, ಬೆಂಗಳೂರು,

...3

4. ನಿರ್ದೇಶಕರು, ಖಜಾನೆ ಇಲಾಖೆ, ವಿಶ್ವೇಶ್ವರಯ್ಯ ಮುಖ್ಯ ಗೋಪುರ, ಬೆಂಗಳೂರು.
5. ಜಂಟಿ ನಿರ್ದೇಶಕರು, ಖಜಾನೆ ಆಯುಕ್ತಾಲಯ, KPCL ಹಸಿರು ಕಟ್ಟಡ, ಅರಮನೆ ರಸ್ತೆ, ಬೆಂಗಳೂರು.
6. ಲೆಕ್ಕಪತ್ರ ಶಾಖೆ, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ).
7. ಸಾಪ್ತಾಹಿಕ ರಾಜ್ಯ ಪತ್ರ/ಶಾಖಾ ರಕ್ಷ ಕಡತ/ಹೆಚ್ಚುವರಿ ಪ್ರತಿ.

**ಪ್ರತಿ ಮಾಹಿತಿಗಾಗಿ:**

1. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ), ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿ ಕಟ್ಟಡ, ಬೆಂಗಳೂರು.
2. ಸರ್ಕಾರದ ಉಪ ಕಾರ್ಯದರ್ಶಿಗಳು, ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ ಹಾಗೂ ನೋಂದಣಿ ಮತ್ತು ಮುದ್ರಾಂಕ), ಇವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
3. ಸರ್ಕಾರದ ಉಪ ಕಾರ್ಯದರ್ಶಿ-2, ಆರ್ಥಿಕ ಇಲಾಖೆ, ಇವರ ಆಪ್ತ ಸಹಾಯಕರು, ವಿಧಾನಸೌಧ, ಬೆಂಗಳೂರು.

ಸರ್ಕಾರದ ಆದೇಶ ಸಂಖ್ಯೆ: ಕಂಇ 408 ಟಿಎನ್‌ಆರ್ 2023, ಬೆಂಗಳೂರು, ದಿನಾಂಕ:19-09-2024ಕ್ಕೆ ಸಂಬಂಧಿಸಿದ ಅನುಬಂಧ.

## Duties and Responsibilities

The Information, Education and Communication (IEC) Officer will lead the development and implementation of an inter-agency communication strategy with the aim to raise awareness of the Disaster Management dept activities in the state and support the resources mobilization and partnership building efforts of the program. He/she will support:

1. Analyse requirements and help integrate advocacy and communication strategies
2. Preparation of the annual IEC Action Plan.
3. Working out implementation strategies and timeline of the action plan including obtaining approvals.
4. Liaison with various implementing agencies both in the government and private sector, and consultants
5. Undertake communication needs assessment for each target group.
6. Develop and devise IEC messages based on the communication needs as well as the requirements of particular programmes.
7. Conceptualise and develop IEC templates/software for audio visual, print, press, outdoor outreach modes, new and emerging media.
8. Execute and supervise all production related work of Radio/ TV Programmes/ including booking of slots/empanelment.
9. Preview of TV/ Radio Programmes. ix. Vetting of Scripts of Radio Programmes/ Spots etc.
10. Planning of Press and Outdoor Publicity.
11. Printing of Guidelines/ Publicity Material including Supervision of Designing/ Proof Reading etc.
12. Organization of Conferences, Workshops, Seminars.
13. Make presentations regarding IEC activities etc. in various seminars and workshops.
14. Impact Assessment of Radio/ TV and other modes of publicity.
15. Coordination with DIPR/DAVP/ Prasar Bharati/Press.
16. Response to Assembly questions, RTI etc. relating to IEC.
17. Various write-ups and briefs regarding IEC.
18. Prepare press statements/ hand outs /articles /features etc.
19. Administrative and Staff Matter in respect of IEC as per requirement.

## Competencies:

- **Corporate Competencies:**

  Displays cultural, gender, religion, race, nationality and age sensitivity and adaptability;
  Treats all people fairly without favouritism.

- **Functional Competencies:**

  **Technical Expertise:**

- Has good understanding of social mobilization and behaviour change especially at community level.
- Good knowledge of current issues related to the Revenue dept programs in the country;
- Has working knowledge of the Department initiatives;
- Ability to implement communication and publications strategies;
- Ability to conceptualize issues and analyse data.

**Communication Skills:**

- Demonstrates excellent ability to write and communicate orally in Kannada with accuracy and professionalism.
- Proficiency in the use of office IT applications and internet in conducting research;
- Receives information to seek and understand differing perspectives;
- Good interpersonal skills and ability to establish and maintain effective partnerships and working relations with people in a multi-cultural, multi-ethnic environment with sensitivity and respect for diversity.

**Team work:**

- Appears credible and confident, remaining calm and pleasant when dealing with others in difficult situations;
- Builds and maintains constructive relationships with colleagues (and reports where appropriate); treats people with respect, is co-operative, supportive and helpful with a positive contribution to the working environment;
- Reliable in delivering own parts of the work as part of a team effort;
- Demonstrates an understanding of what other professionals contribute in order to work constructively within the office.

## Required Skills and Experience

- **Education:**

  Post Graduate qualification in Communications, Journalism, Public Relations or related fields.

- **Experience:**

  Minimum of 5 years of experience working in public relations, communications and/or advocacy with a multilateral or international organization, the private sector or governmental bodies Experience using multi-media, social networking approach is an asset.

- **Language:**

  Fluency in written and spoken Kannada and English.

Mullunupma H g.
19/9/2024
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ಸೇವೆಗಳು-3 & ವಿಪತ್ತು ನಿರ್ವಹಣೆ)